ನರ್ಮದೆಯು ಕುಂಕುಮವನ್ನು ಬೆರೆಸಿದ ನೀರಿನಂತೆ ಹರಿಯುತಿತ್ತು. ಒಬ್ಬ ದಕ್ಷಿಣಾಪಥೇಶ್ವರನಾದರೆ ಇನ್ನೊಬ್ಬ ಉತ್ತರಾಪಥೇಶ್ವರ. ಎರಡೂ ಸೈನ್ಯಗಳ ಕಾಲ್ದಳ, ಅಶ್ವದಳ, ಗಜದಳಗಳು ರಣಭೂಮಿಯಲ್ಲಿ ವೀರಾವೇಶದಿಂದ ಹೋರಾಡುತ್ತಿದ್ದವು. ಹಲವು ದಿನ ನಡೆದಂಥ ಈ ಯುದ್ಧವು ಅಂತಿಮ ಘಟ್ಟಕ್ಕೆ ಬಂದು ನಿಂತಿತ್ತು. ಹರ್ಷನ ಸೈನ್ಯವು ಚಾಲುಕ್ಯರ 'ಅಜೇಯಬಲ'ದ ಶೌರ್ಯತನಕ್ಕೆ ಮರ್ಮಾಘಾತಗೊಂಡಿತ್ತು. ಅದರಲ್ಲೂ ವಿಶೇಷವಾಗಿ ಗಜದಳ, ಅಶ್ವದಳವಂತೂ ಇನ್ನಿಲ್ಲದಂತೆ ನಿರ್ನಾಮಗೊಂಡಿತ್ತು.

ಇಂತಹ ಸಂದರ್ಭದಲ್ಲಿಯೇ ಹರ್ಷವರ್ಧನ ಕನೌಜಿನಿಂದ ಇನ್ನಷ್ಟು ಅಶ್ವದಳವನ್ನು ತರಿಸಿಕೊಳ್ಳಬೇಕಾಯಿತು. ಹೊಸ ಅಶ್ವದಳದೊಂದಿಗೆ ಹೊಸ ಸೇನಾನಿಗಳು ಬಂದು ಸೇರಿದರು. ಆದರೆ ಪುಲಕೇಶಿಯ ಸೈನ್ಯದೆದುರು ವೈರಿಯ ಗಜದಳ, ಅಶ್ವದಳ ಜೊತೆಗೆ ಕಾಲ್ದಳವು ಮತ್ತೇ ನೆಲಕಚ್ಚಲು ಪ್ರಾರಂಭಿಸಿತು. ಚಾಲುಕ್ಯ ಸೈನ್ಯದ ವೀರಾವೇಶ, ಪರಾಕ್ರಮ ಎದುರು ತನ್ನ ಸೈನ್ಯದ ಅಧಃಪತನ ಕಂಡ ಹರ್ಷವರ್ಧನ ಕೊನೆಗೆ ಪುಲಕೇಶಿಯ ಎದುರು ಪರಾಜಯಗೊಂಡು ಒಪ್ಪಂದಕ್ಕೆ ಬರುವಂತಾಯಿತು. ದಕ್ಷಿಣಾಪಥೇಶ್ವರನಾಗಲು ಬಂದಿದ್ದ ಹರ್ಷ ತನ್ನ ಜೀವನದಲ್ಲಿ ಹರ್ಷವನ್ನೆ ಕಳೆದುಕೊಂಡು ತನ್ನ ಸೈನ್ಯವನ್ನು ಉಳಿಸಿಕೊಳ್ಳುವುದೇ ದೊಡ್ಡ ಸಾಹಸವಾಯಿತು.

ಹೃದಯವಂತ ಪುಲಕೇಶಿ ಹರ್ಷನ ಒಪ್ಪಂದಕ್ಕೆ ಒಪ್ಪಿದ. ಹಲವು ದಿನಗಳಿಂದಲೂ ಭೀಕರ ಕದನಕ್ಕೆ ಸಾಕ್ಷಿಯಾಗಿದ್ದ ನರ್ಮದೆಯ ತಟವು ಶಾಂತವಾಗಿತ್ತು. ಆ ಸಂಜೆ ಎರಡೂ ಸೈನ್ಯಗಳ ಸೈನಿಕರು ನೆಮ್ಮದಿಯಿಂದ ತಮ್ಮ ತಮ್ಮ ಬಿಡಾರದಲ್ಲಿ ತಂಗಿದ್ದರು. ಮಧ್ಯರಾತ್ರಿ ಹರ್ಷನ ಸೈನ್ಯದ ಬಿಡಾರದಲ್ಲಿ ಒಮ್ಮೆಲೆ ಕಿರುಚಾಟ, ಚೀರಾಟ ಜೊತೆಗೆ ಅಳು ಕೇಳಿ ಬಂತು. ಪುಲಕೇಶಿ, ಹರ್ಷವರ್ಧನ, ರವಿಕೀರ್ತಿ ಸೇರಿದಂತೆ ಎಲ್ಲರೂ ಹೋಗಿ ನೋಡಿದರೆ ಒಬ್ಬ ಸೈನಿಕನ ಡೇರೆಯಲ್ಲಿ ಇಬ್ಬರು ವ್ಯಕ್ತಿಗಳು ರಕ್ತದ ಹೊಳೆಯಲ್ಲಿ ಬಿದ್ದಿದ್ದರೆ ಅವುಗಳನ್ನು ತಬ್ಬಿಕೊಂಡ ಇನ್ನೊಬ್ಬ ವ್ಯಕ್ತಿಯ ಆಕ್ರಂದನ ಮುಗಿಲು ಮುಟ್ಟಿತ್ತು. ಘಟನೆಯ ಕುರಿತು ವಿಚಾರಿಸಲಾಗಿ ಯಾರೋ ಇಬ್ಬರು ಮುಸುಕುಧಾರಿಗಳು ಆ ಇಬ್ಬರನ್ನೂ ಕೊಂದು ಹೋದರು ಎಂದು ತಿಳಿದು ಬಂದಿತು. ಆದರೆ, ಮುಸುಕು ಮೇಲಾಗಿ ಪಂಜಿನ ಮಬ್ಬುಗತ್ತಲದಲ್ಲಿ ಅವರಾರೆಂದು ಗೊತ್ತಾಗಲಿಲ್ಲ. ಕಾರಣವೂ ಗೊತ್ತಾಗಲಿಲ್ಲ. ಮಾರನೇ ದಿನ ಬೆಳಗ್ಗೆ ರಾತ್ರಿಯ ಪರಿಸ್ಥಿತಿ ತಹಬದಿಗೆ ಬಂದ ನಂತರ ಆ ಇಬ್ಬರ ಶವಗಳನ್ನು ಸಂಸ್ಕಾರ ಮಾಡಿ ಎರಡು ಸೈನ್ಯಗಳು ತಮ್ಮ ರಾಜ್ಯದತ್ತ ಮರಳಿದವು. ಪುಲಕೇಶಿಯ ಸೈನ್ಯವು ವಾತಾಪಿಯತ್ತ ಮುಖ ಮಾಡಿದಾಗ ಆ ಸೈನ್ಯದೊಂದಿಗೆ ನಿನ್ನೆ ರಾತ್ರಿ ಆಕ್ರಂದನ ಮಾಡುತ್ತಿದ್ದ ಆ ವ್ಯಕ್ತಿಯು ಹೊರಟಿದ್ದು ಪುಲಕೇಶಿ ಗಮನಕ್ಕೆ ಬಾರದಿರಲಿಲ್ಲ. ಅದನ್ನು ನೋಡಿದ ಚಕ್ರವರ್ತಿ ರವಿಕೀರ್ತಿಯತ್ತ ನೋಡಿ ಆತನ ಮೇಲೆ ಒಂದು ಕಣ್ಣು ಇಡಲು ಸಂಜ್ಞೆ ಮಾಡಿದ್ದ.

ನರ್ಮದೆಯ ತೀರದಿಂದ ಚಾಲುಕ್ಯ ಸೈನ್ಯವು ವಾತಾಪಿ ತಲುಪಲು ಸಾಕಷ್ಟು ದಿನಗಳೇ ಬೇಕಾಯಿತು. ನಂತರ ವಾತಾಪಿ ತಲುಪಿದ ಸೈನ್ಯವು ಹಲವು ದಿನಗಳ ಯುದ್ಧದ ಕಾರಣದಿಂದ ಎಲ್ಲ ದಳಗಳು ವಿಶ್ರಾಂತಿಗೆ ತೆರಳಿದವು. ಈ ಮಧ್ಯೆ ರವಿಕೀರ್ತಿ ಸೈನ್ಯದೊಂದಿಗೆ ಬಂದಿದ್ದ ಆ ಆಗಂತುಕನ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ದೊರೆಗೆ ತಲುಪಿಸಿದ್ದ. ಜೊತೆಗೆ ದೊರೆ ತಾವೇ ಸ್ವತಃ ಆತನ ಬಗ್ಗೆ ಗಮನವಿರಿಸಿದ್ದರು. ಕೆಲವು ತಿಂಗಳುಗಳ ಗತಿಸಿದವು. ವರ್ಷವೇ ಗತಿಸಿತು. ಕೆಲವೇ ದಿನಗಳಲ್ಲಿ ಆತ ತನ್ನ ನಿಸ್ಪಹ ಕಾರ್ಯಗಳಿಂದ ಆಸ್ಥಾನಕ್ಕೆ ಹತ್ತಿರದವನಾದ. ಆದರೆ, ಸಾರ್ವಜನಿಕವಾಗಿ ಆತ ಅಪರಿಚಿತನಾಗಿಯೇ ಉಳಿದ. ಒಂದು ದಿನ ಸೇನಾಧಿಪತಿ ವೀರಾದಿತ್ಯ ಆ ವ್ಯಕ್ತಿಯನ್ನು ಅಮಾನುಷವಾಗಿ ಥಳಿಸಿದ್ದು ದೊರೆಯನ್ನು ಕೆರಳಿಸಿತ್ತು. ಜೊತೆಗೆ ಗೂಢಚಾರರಿಂದ ಆ ಪ್ರಕರಣದ ಹಿನ್ನೆಲೆ ತಿಳಿದ ಮೇಲಂತೂ ಪುಲಕೇಶಿಯ ತಾಳ್ಮೆಯ ಪರದೆ ಹರಿದು ಕೂಡಲೇ ತುರ್ತು ಸಭೆ ಏರ್ಪಾಡು ಮಾಡಲು ರವಿಕೀರ್ತಿಗೆ ಆಜ್ಞಾಪಿಸಿದ್ದು.

***

ಪುಲಕೇಶಿ ಸಹೋದರ ವಿಷ್ಣುವರ್ಧನ ಜೊತೆಗೂಡಿ ಆಸ್ಥಾನದ ಸಭೆಗೆ ಆಗಮಿಸುವ ಪೂರ್ವದಲ್ಲಿಯೇ ಆಗಲೇ ರಾಜಸಭೆಯಲ್ಲಿ ರವಿಕೀರ್ತಿ ಸೇರಿದಂತೆ ಇತರ ಮಂತ್ರಿ ಮಾಗದರು, ಮಂಡಲಾಧೀಶರು, ಸೇನಾಧಿಪತಿಗಳು, ವಾತಾಪಿಯ ಮುಖ್ಯ ವಣಿಕರು, ಸಾಹಿತ್ಯ ವಿದ್ವಜ್ಜನರು ಉಪಸ್ಥಿತರಿದ್ದು ಪುಲಕೇಶಿ ಬಂದಾಗ ಗೌರವದಿಂದ ಬಾಗಿ ನಮಿಸಿದರು.



ಪುಲಕೇಶಿಯು ಸಿಂಹಾಸನದಲ್ಲಿ ಆಸೀನನಾಗಲು ಆತನ ಪಕ್ಕದ ಇನ್ನೊಂದು ಸಿಂಹಾಸನದಲ್ಲಿ ವಿಷ್ಣುವರ್ಧನ ಕುಳಿತಾಗ ಎಲ್ಲರೂ ತಮ್ಮ ತಮ್ಮ ಆಸನದಲ್ಲಿ ಕುಳಿತರು. ಅದಾಗಲೇ ಸೇನಾಧಿಪತಿ ವೀರಾದಿತ್ಯ ಸಿಂಹಾಸನದ ಗಾವುದ ದೂರದಲ್ಲಿದ್ದ ವಿಚಾರಣಾ ಸ್ಥಳದಲ್ಲಿ ಕೈಕಟ್ಟಿ ನಿಂತುಕೊಂಡಿದ್ದರೆ, ಸಿಂಹಾಸನದ ಇನ್ನೊಂದು ಬದಿಯಲ್ಲಿ ಅವನಿಗೆದುರಾಗಿ ಹಲ್ಲೆಗೊಳಗಾದ ವ್ಯಕ್ತಿ ಕಾಂತಿಹೀನ ಮುಖದಲ್ಲಿ ನಿಂತಿದ್ದನು. ಚಕ್ರವರ್ತಿ ವಿಚಾರಣೆಗೆ ಅನುಮತಿ ನೀಡಲು ರವಿಕೀರ್ತಿಯು ಎರಡು ದಿನಗಳ ಹಿಂದೆ ಜರುಗಿದ್ದಂತಹ ಆಪ್ತಸಭೆಯ ಮಾಹಿತಿಯನ್ನು ಸಭಾಸದರ ಮುಂದೆ ಹೇಳಲು ಪ್ರಾರಂಭಿಸಿದನು. ಜೊತೆಗೆ ಆಪ್ತಸಭೆಯಲ್ಲಿ ದೊರೆಯು ಆಜ್ಞಾಪಿಸಿದಂತೆ ಮೊದಲು ಆಗಂತುಕನ ಹಿಂದಿನ ವೃತ್ತಾಂತವನ್ನು ಸಭೆಯ ಮುಂದೆ ಪ್ರಸ್ತಾಪಿಸಲು ತಿಳಿಸಿದ್ದರಿಂದ ಉಪಸ್ಥಿತರಿದ್ದ ಎಲ್ಲರೂ ಗಂಭೀರವಾಗಿ ರವಿಕೀರ್ತಿಯ ಮಾತುಗಳನ್ನು ಕಿವಿಗೊಟ್ಟು ಆಲಿಸ ತೊಡಗಿದರು.

'ಈತನ ಹೆಸರು ಮಹಾಬಲನೆಂದು ನಿಮ್ಮಲ್ಲಿ ಕೆಲವರಿಗೆ ಮಾತ್ರ ಗೊತ್ತಿರಬಹುದು. ಉತ್ತರದ ಕನೌಜ ನಗರದವನು. ಎರಡು ವರ್ಷಗಳ ಹಿಂದೆ ಹರ್ಷವರ್ಧನ ದೊರೆಗಳ ಜೊತೆಗೆ ನರ್ಮದಾ ತಟದಲ್ಲಿ ನಡೆದ ಭೀಕರ ಕಾಳಗದ ವೇಳೆ ಹರ್ಷವರ್ಧನರ ಅಶ್ವದಳವೆಲ್ಲ ನಾಶವಾದಾಗ ಹೆಚ್ಚಿನ ಅಶ್ವದಳವನ್ನು ಕನೌಜಿನಿಂದ ಯುದ್ಧಭೂಮಿಗೆ ತರಲಾಗಿತ್ತು. ಆ ವೇಳೆಯಲ್ಲಿ ಈ ಮಹಾಬಲ ಆ ಸೈನ್ಯದೊಂದಿಗೆ ಬಂದು ಕೂಡಿಕೊಂಡವನು. ಸೈನ್ಯದೊಂದಿಗೆ ಸೇರಿಕೊಳ್ಳಲು ಕಾರಣವೆಂದರೆ ಈತ ಎಲ್ಲ ತಳಿಯ ಅಶ್ವಗಳ ಗುಣ, ಸ್ವಭಾವವನ್ನು ಅರಿತವನಾಗಿದ್ದ. ಅಷ್ಟೇ ಅಲ್ಲ ಯಾವುದೇ ಜಾತಿಯ ಅಶ್ವವೇ ಇರಲಿ, ಯಾವ ದೇಶದ ಎಂತಹ ಹಟಮಾರಿ ಅಶ್ವವೇ ಇರಲಿ ಅಂಥವುಗಳನ್ನು ಪಳಗಿಸುವಂಥ ಚಾಕಚಕ್ಯತೆ ಕರಗತ ಮಾಡಿಕೊಂಡವನು. ಎಂತಹ ಸೊಕ್ಕಿನ ಕುದುರೆ ಆಗಿರಲಿ ಒಮ್ಮೆ ಈತನ ಕೈಗೆ ಬಂದಿತೆಂದರೆ ಕೆಲವೇ ದಿನಗಳಲ್ಲಿ ಅದು ಪುಂಗಿಯ ನಾದಕ್ಕೆ ತಲೆದೂಗುವ ಹಾವಿನಂತೆ ಮಾಡುವ ಪರಿಣತ. ಆ ವಿಷಯದಲ್ಲಿ ಅಷ್ಟು ಪಾರಂಗತ. ಅಂತಹ ಅದೆಷ್ಟು ಕುದುರೆಗಳು ಪಳಗಿ ಸೈನ್ಯಕ್ಕೆ ಸೇರ್ಪಡೆಗೊಂಡಿವೆಯೋ ಲೆಕ್ಕವಿಲ್ಲ. ಹರ್ಷವರ್ಧನರ ಸೈನಿಕರು ಬಳಸುವ ಅಶ್ವಗಳೆಲ್ಲ ಆ ಕದನ ಭೂಮಿಯಲ್ಲಿ ನಾಶವಾದ್ದರಿಂದ ಅನಿವಾರ್ಯವಾಗಿ ಪಳಗಿಸಿದ ಅಂತಹ ಹಲವಾರು ಅಶ್ವಗಳೊಂದಿಗೆ ಈತ ನರ್ಮದೆಯ ತೀರದ ಯುದ್ಧಭೂಮಿಗೆ ಬಂದದ್ದು.

ಜೊತೆಗೆ ತನ್ನ ಅಣ್ಣ, ಮಗನೊಂದಿಗೆ ಬಂದಿಳಿದಾಗ ಯುದ್ಧ ಮತ್ತೇ ಹಲವು ದಿನ ನಡೆಯಿತು. ಸಮರವು ಕೊನೆಯ ಘಟ್ಟದಲ್ಲಿ ಇದ್ದಾಗ ಒಂದು ರಾತ್ರಿ ದುರ್ಘಟನೆ ಜರುಗಿತು. ಈತ ಇದ್ದ ಬಿಡಾರದಲ್ಲಿ ಈತನ ಮಗ, ಅಣ್ಣನನ್ನು